<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>

<u>ಸತ್ರ ಮೊಕದ್ದಮೆ ಸಂಖ್ಯೆ: 11/2024</u>

ಪಿ.ಡಬ್ಲುಃ 17 ಸಿಡಬ್ಲುಃ 18

| | | |
|---|---|---|
| ಸಾಕ್ಷಿಯ ಹೆಸರು | : | ವಿ.ವಸುಹಾರಪ್ಪ |
| ತಂದೆಯ ಹೆಸರು | : | ವಿ.ಚೌಡಪ್ಪ |
| ವಯಸ್ಸು | : | 40 ವರ್ಷಗಳು |
| ವೃತ್ತಿ | : | ಮುಖ್ಯ ಪೇದೆ ಬ ನಂ.216, ಸಂಡೂರು ಪೋಲೀಸ್ ಠಾಣೆ |
| ವಾಸಸ್ಥಳ | : | ಸಂಡೂರು. |

<u>ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 18.02.2026.</u>

<u>ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-</u>

1) ನಾನು 2018 ರಿಂದ 2025 ರವರೆಗೆ ಸಂಡೂರು ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕಾರ್ಯ ನಿರ್ವಹಿಸುತ್ತಿದ್ದೇನೆ.

2) ಈ ಪ್ರಕರಣದಲ್ಲಿ ಚಾಸಾ-24 ಇವರ ಆದೇಶದ ಮೇರೆಗೆ ದಿಃ06.10.2023 ರಂದು ಕೃತ್ಯ ಸ್ಥಳದ ಪಂಚನಾಮೆಗೆ ಕರೆದುಕೊಂಡು ಹೋಗಿದ್ದು ಠಾಣೆಗೆ ವಿತರಣೆಯಾದ ಲ್ಯಾಪ ಟಾಪ್ ನಲ್ಲಿ ಪಂಚರ ಸಮಕ್ಷಮ ಪಿಎಸ್ಐ ರವರು ಉಕ್ತಲೇಖನ ನೀಡಿದಂತೆ ಮಧ್ಯಾಹ್ನ 12.15 ರಿಂದ 1.15 ರವರೆಗೆ ಸ್ಥಳದಲ್ಲಿ ನಿಪಿ.9 ಪಂಚನಾಮೆಯನ್ನು ಬೆರಳಚ್ಚು ಮಾಡಿರುತ್ತೇನೆ. ಅದೇ ದಿವಸ ಮಧ್ಯಾಹ್ನ 3.40 ರಿಂದ 4.40 ಗಂಟೆಯವರೆಗೆ ಆರೋಪಿತನು ತೋರಿಸಿ ಹಾಜರುಪಡಿಸಿದ ಮಚ್ಚಿನ ಜಪ್ತಿ ಪಂಚನಾಮೆಯನ್ನು ಪಂಚರ ಸಮಕ್ಷಮದಲ್ಲಿ ಪಿಎಸ್ಐ ರವರು ಉಕ್ತಲೇಖನ ನೀಡಿದಂತೆ ನಿಪಿ.3 ಪಂಚನಾಮೆಯನ್ನು ಬೆರಳಚ್ಚು ಮಾಡಿರುತೇನೆ.

3. ದಿಃ07.10.2023 ರಂದು ದೂರುದಾರರು ಠಾಣೆಗೆ ಹಾಜರಾಗಿ ಅವರ ತಂದೆಯ ರಕ್ತ ಹತ್ತಿದ ಬಟ್ಟೆಗಳನ್ನು ಹಾಜರುಪಡಿಸಿದ್ದು, ಪಿಎಸ್ಐ ರವರು ಪಂಚರ ಸಮಕ್ಷಮದಲ್ಲಿ ಪರಿಶೀಲನೆ ಮಾಡಿ ಅವರು ಉಕ್ತಲೇಖನ ನೀಡಿದಂತೆ ಮುಂಜಾನೆ 10.30 ರಿಂದ 11.30 ಗಂಟೆಯವರೆಗೆ

ನಿಪಿ.13 ಪಂಚನಾಮೆಯನ್ನು ಬೆರಳಚ್ಚು ಮಾಡಿರುತ್ತೇನೆ. ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ.13(ಸಿ) ಎಂದು ಗುರುತಿಸಲಾಯಿತು.

4. ದಿಃ07.10.2023 ರಂದು ತನಿಖಾಧಿಕಾರಿಗಳ ಆದೇಶದ ಮೇರೆಗೆ ಕೃತ್ಯಕ್ಕೆ ಬಳಕೆ ಮಾಡಿದ ಮಚ್ಚನ್ನು ವೈದ್ಯಾಧಿಕಾರಿಗಳ ಬಳಿ ಹಾಜುರುಪಡಿಸಿ ಅವರ ಅಭಿಪ್ರಾಯವನ್ನು ಪಡೆದುಕೊಂಡಿರುತ್ತೇನೆ. ಸದರಿ ಮನವಿ ಪತ್ರವನ್ನು ಈಗಾಗಲೇ ನಿಪಿ17 ಎಂದು ಗುರುತಿಸಲಾಗಿದೆ.

5. ದಿಃ08.10.2023 ರಂದು ತನಿಖಾಧಿಕಾರಿಗಳ ಆದೇಶದ ಮೇರೆಗೆ ಕೃತ್ಯ ಸ್ಥಳವನ್ನು ಚಾಸಾ.23 ಇವರಿಗೆ ತೋರಿಸಿರುತ್ತೇನೆ. ಅವರು ಅಲ್ಲಿ ಕೃತ್ಯ ಸ್ಥಳದ ನಕ್ಷೆಯನ್ನು ನಿಪಿ.21 ರಂತೆ ತೆಗೆದಿರುತ್ತಾರೆ. ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ.21(ಬಿ) ಎಂದು ಗುರುತಿಸಲಾಯಿತು.

ಆರೋಪಿ ಪರವಾಗಿ ಶ್ರೀ.ಎನ್.ಬಿ.ಕೆ ವಕೀಲರು ಎಲ್.ಎ.ಡಿ.ಸಿ ರವರಿಂದ

6. ನನಗೆ ಬೆರಳಚ್ಚು ಮಾಡಲು ಬರುತ್ತದೆ ಎಂದು ತೋರಿಸಲು ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಆದರೆ ನನ್ನ ಸೇವಾ ಪುಸ್ತಕದಲ್ಲಿ ನಮೂದಾಗಿರುತ್ತದೆ. ಒಂದು ಪುಟವನ್ನು ಬೆರಳಚ್ಚು ಮಾಡಲು ಸುಮಾರು 15-20 ನಿಮಿಷ ಬೇಕಾಗುತ್ತದೆ. ನಾನು ಪ್ರಶ್ನಿತ ಕೃತ್ಯ ನಡೆದ ಸ್ಥಳದಲ್ಲಿ ಯಾವುದೇ ಪಂಚನಾಮೆಯ ಬೆರಳಚ್ಚುನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಠಾಣೆಗೆ ಬಂದ ನಂತರ ಪಂಚನಾಮೆಯನ್ನು ಪ್ರಿಂಟ್ ತೆಗೆದು ಪಂಚರ ಸಹಿಯನ್ನು ಪಡೆದಿರುತ್ತೇವೆ ಎಂದರೆ ಸರಿ.

7. ನಿಪಿ.9 ಹಾಗೂ 3 ಪಂಚನಾಮೆಗಳಲ್ಲಿ ನಾನು ಅವುಗಳನ್ನು ಬೆರಳಚ್ಚು ಮಾಡಿದ ಬಗ್ಗೆ ಸಹಿ ಇರುವುದಿಲ್ಲ ಎಂದರೆ ಸರಿ. ಆರೋಪಿತನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಮತ್ತು ಯಾವುದೇ ವಸ್ತುಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ.23 ಇವರಿಗೆ

ಪ್ರಶ್ನಿತ ಕೃತ್ಯ ಸ್ಥಳವನ್ನು ತೋರಿಸಿಲ್ಲ ಮತ್ತು ಅವರು ಅಲ್ಲಿ ನಕ್ಷೆಯನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

8. ನಾನು ವೈದ್ಯಾಧಿಕಾರಿಗಳ ಬಳಿ ಮಚ್ಚನ್ನು ಹಾಜರುಪಡಿಸಿಲ್ಲ ಮತ್ತು ಅವರ ಅಭಿಪ್ರಾಯವನ್ನು ಕೇಳಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.